ಆಶ್ಚರ್ಯವಾಗುತ್ತದೆ. ನೀರಸವೆನಿಸಿದ, ಪ್ರತಿಗಳಿಗೆಯೂ ಅಸಹ್ಯವೆನಿಸತೊಡಗಿದ್ದ ಈ ಹತಾಶೆಯ ಬದುಕನ್ನು ಕೊನೆಗಾಣಿಸಿಕೊಳ್ಳಲು ಹೊರಟಿದ್ದ ನಾನು – ಬಂದ ಅವನು!

ಚಣಮಾತ್ರದಲ್ಲಿ ಭಿತ್ತಿಯಲ್ಲಿ ಗೆರೆ ಕೊರೆದು ಫಳೀರೆಂದು ಮರೆಯಾಗಿಬಿಡುವ ಮಿಂಚಿನ ವೇಗವಿತ್ತು ಅವನಲ್ಲಿ. ಅಥವಾ ಮಂದಗಾಳಿಯಲೆಗೆ ಅಲುಗಿ ಒಂದರೆಚಣ ನಿಶ್ಯಬ್ದವಾಗಿಬಿಡುವ ಎಲೆಯ ಅಲುಗಾಟದ ಮಂದಗತಿಯಿತ್ತು ಅವನಲ್ಲಿ. ಯೋಚಿಸಲು ಸಹ ಆಸ್ಪದವಿರದಷ್ಟು ಕ್ಲುಪ್ತ ಸಮಯ ನನಗೆ. ಆತ ಬಂದುಬಿಟ್ಟ. ಕದಾಚಿತ್, ಅಪ್ಪಣೆಯಿಲ್ಲದೆ ಮನೆಯ ಮೂಲೆ ಮೂಲೆ ಸುತ್ತುವ ಕೆಂಪು ಕೊಕ್ಕಿನ ಹಕ್ಕಿಯ ಹಾಗೆ ನನ್ನ ಮುಚ್ಚಿದ ಮನದ ಕದ ತೆರೆದು ಒಳ ನಡೆದುಬಿಟ್ಟ. ಬೇಡವೆನ್ನಿಸಲಿಲ್ಲ.

ಮೊದಲಿಗೆ ನಿರ್ಧಾರದ ಅಂಚಲ್ಲಿ ತೂಗುಯ್ಯಾಲೆಯಾಡುತ್ತ ಶೂನ್ಯದಲ್ಲಿ ಜೀಕುತ್ತ ಮುಷ್ಟಿ ಬಿಗಿ ಹಿಡಿದು ತಹತಹಿಸುತ್ತ ನಿಂತ ನನ್ನನ್ನು ನೋಡಿದನಿರಬೇಕು. ಎದುರಿಗೆ ಬಂದು ನಿಂತು ಪೆದ್ದು ಪೆದ್ದಾಗಿ ತುಟಿಯಗಲಿಸಿ ನಕ್ಕನಿರಬೇಕು. ನನ್ನಿಂದ ಮಾತು ಬರದಾದಾಗ ತುಸು ಹೆಚ್ಚೇ ಬಾಯಗಲಿಸಿ ಮತ್ತೊಮ್ಮೆ ನಕ್ಕನಿರಬೇಕು. ಎರಡನೆಯ ನಗುವಿಗೆ ಕಂಡವು ಪುಟ್ಟ ಪುಟ್ಟ ಬಿಳಿ ಹಲ್ಲುಗಳ ಸಾಲು. ನಕ್ಕಾಗ ಬಾಯಿ ತುಸು ತಿರುಚಿ ಸೊಟ್ಟಾಗಿ, ಕುರುಚಲು ಗಡ್ಡ ನಸು ನಲುಗಿ ಎಂಥದೋ ಆಕರ್ಷಣೆ. ಜತೆಗೆ ಹೆಗಲಿಗೆ ಚೀಲ ಬೇರೆ. ಈತನ ಬದುಕಿನ ಗುಟ್ಟುಗಳೆಲ್ಲ ಅವುಗಳಿರಬಹುದೊ ಎಂತದ್ದೋ ಎಂಬಂತೆ. ಮಾತು ಮಾತಿಗೆ ಸಂಕೋಚ. ಹೋಗಲಾಡಿಸಿ ಧೈರ್ಯ ತಂದುಕೊಳ್ಳಬೇಕೆಂದೂ ಏನೋ ಕೈಯನ್ನು ಗದ್ದಕ್ಕೆ ತಂದು ಕುರುಚಲು ಗಡ್ಡ ನೇವರಿಸಿಕೊಳ್ಳುವುದು. ಅರೆ! ನಾನು ಸಾಯಲು ಬಂದವಳು. ನೆನಪಿದೆ! ಆದರೆ ಅದನ್ನು ಮರೆತು ಇವನನ್ನೇ ನೋಡುತ್ತ ಸುಖಾಸುಮ್ಮನೆ ನಿಂತು ಬಿಟ್ಟೆ.

ನೆನಪಿನ ಸುನಯನಾ ನದಿ ತೀರದಲ್ಲಿ ಸಾಲು ಸಾಲು ಬೆಳ್ಳಂಬೆಳ್ಳಕ್ಕಿ ಹಾರಿದವು. ಅವು ಅವನ ಪುಟ್ಟ ಮಾಟವಾದ ಹಲ್ಲಿನ ಸಾಲುಗಳಿರಬೇಕು. ಅಲ್ಲ, ಅಪ್ಪನ ಜತೆ ಗದ್ದೆ ವಡ್ಡಿನ ಮೇಲೆ ನಡೆವಾಗ ತುದಿಗೆ ಬಂದರೆ ಅಲ್ಲೊಂದು ಗಿಡ. ಮೈಗೆಲ್ಲ ಕೆಂಪು ಹೊದ್ದ ಅದರ ಹಣ್ಣು. ಗಿಡದಿಂದುದುರಿ ನೆರಳಲ್ಲಿ, ಒಣಗಿದೆಲೆಗಳ ರಾಶಿಯಡಿಯಲ್ಲಿ ತಣ್ಣಗೆ ಕೂತ ಆ ಹಣ್ಣನ್ನು ಕೈಗೆತ್ತಿಕೊಂಡು ಬಿಡಿಸಿದರೆ – ಮುತ್ತಿನ ರಾಶಿಯಂಥ ಬೀಜಗಳು. ಆ ಹಣ್ಣು ದಾಳಿಂಬೆ ಇರಬೇಕು. ಅಥವಾ ಸೀತಾಫಲವೇ ಸರಿ. ಇರಲಿ, ಯಾವ ಹೆಸರಿನ ಹಣ್ಣಾದರೇನು? ಅವು – ಆ ಒರಟುಗೂದಲ, ತುಸು ಅಗಲ ಮೂಗಿನ ಹುಡುಗನ ಹಲ್ಲುಗಳಾಗಿರಲಿ. ಸುನಯನಾ ನೆನಪಿನ ನದಿ ಮನದಲ್ಲಿ ಹೀಗೇ ಹರಿದು ತಂಪು ಮೂಡಿಸುತ್ತಿರಲಿ. ಬಣ್ಣದ ಪತಂಗಗಳು ರೆಕ್ಕೆಯನ್ನು ಹಾಯಿಯಂತೆ ಗಾಳಿಯಲ್ಲಲುಗಿಸಿ ಹಾರುತ್ತಲೇ ಇರಲಿ. ಮೇಲಮೇಲಕ್ಕೇರಿ ಇವು ಆಕಾಶದಲ್ಲಿ ಬೆಳೆವ ಹೂಗಳೇನೋ? ಎಂಬ ಕನಸನ್ನು ಉಕ್ಕಿಸುತ್ತಲೇ ಇರಲಿ.

ಎದೆಯಲ್ಲಿ ಈಗಾಗುತ್ತಿರುವ ಸಂಭ್ರಮ; ತುಟಿ ಕಚ್ಚಿ ಸವಿಯುವ ಸುಖಮಯ ಯಾತನೆ. ಎದೆ ಬಿಗಿ ಹಿಡಿದು ಉಸಿರು ಜೋರು ಸುರಿದು ಬಿಸಿ ಮೈ ನರಗಳಿಗೆಲ್ಲ ಚಿಮ್ಮಿ ಅರಿಯದಂಥ ಛಳಕನ್ನು ಹಾಗೆ ಉಳಿಸುತ್ತಿರಲಿ. ಅವನನ್ನು ಕಂಡಾಗ ಅವನೊಂದು ಮಗುವೆನಿಸಿ ಉಕ್ಕಿದ ಅಕ್ಕರೆಯ ಎಲ್ಲ ಕಾಲಕ್ಕೂ ಉಳಿಸುತ್ತಿರಲಿ.

ಅವನು ಮಾತ್ರ ನೋಡುತ್ತಲೇ ಇದ್ದನಲ್ಲ... ನುಂಗುವಂತೆ. ಗಮನಿಸಿದೆ; ಅವನೆರಡೂ ಕಂಗಳು ರೇವು ಕಾಣದೆ ಕಂಗಾಲಾಗಿ, ಯುಗಾಂತರದಿಂದ ತಂಗಲು ನಿರಂತರ ನಡುಗಡ್ಡೆಯ ಆಶ್ರಯ ಹುಡುಕಿ ಹೊರಟ ಭಗ್ನ ಹಡಗಿನ ಹಾಗೆ ಕಂಡವು. ಕಣ್ಣಲ್ಲಿ ಏನೆಲ್ಲ ಇವೆ? ಮುಂದೊಂದು ಗಳಿಗೆಗೆ